## ಕೆಲವು ಸಲಹೆ ಸೂಚನೆ

- ಚಾರಣಿಗರಿಗೆ ಇದೊಂದು ನಿಜಕ್ಕೂ ಸವಾಲ್. ಹಲವಾರು ಟ್ರೆಕಿಂಗ್ ತಂಡಗಳು ಪ್ಲ್ಯಾನ್ ಮಾಡುತ್ತಿರುತ್ತಾರೆ. ನೋಡಿಕೊಂಡು ಪ್ಲ್ಯಾನ್ ಮಾಡಬಹುದು.
- ಲೋಕಲ್ ವೆಹಿಕಲ್ ಮಾಡಿಕೊಂಡು ಪ್ರಯಾಣ ಮಾಡಿದರೆ ಅನುಕೂಲ. ಟೂ ವೀಲರ್‌ಗಳು ಮನಾಲಿಯಲ್ಲಿ ಬಾಡಿಗೆಗೆ ಸಿಗುತ್ತದೆ. ಅದರಲ್ಲಿ ತೆರಳಿದರೆ ಇನ್ನೂ ಹೆಚ್ಚಿನ ಸಾಹಸ ಮಾಡಿದಂತಾಗುತ್ತದೆ.
- ಬೆಚ್ಚಗಿನ ಬಟ್ಟೆಯನ್ನು ಮತ್ತು ಸಾಧ್ಯವಾದಷ್ಟು ನೀರು ಬಿಸ್ಕೆಟ್ ತೆಗೆದಿಟ್ಟುಕೊಂಡಿದ್ದರೆ ಅನುಕೂಲ. ಯಾಕೆಂದರೆ ಹಲವಾರು ಕಡೆ ಲ್ಯಾಂಡಿ ಸ್ಲೈಡ್ ಆಗುತ್ತಿರುತ್ತದೆ. ದೂರದವರೆಗೂ ಅಂಗಡಿಗಳು ಸಿಗುವುದಿಲ್ಲ.
- ಸೀಜನ್ ನೋಡಿಕೊಂಡು ಇಲ್ಲಿಗೆ ಪ್ಲ್ಯಾನ್ ಮಾಡಬೇಕು. ಫೆಬ್ರವರಿಯಿಂದ ಜೂನ್‌ವರೆಗೂ ಉತ್ತಮವಾಗಿರುತ್ತದೆ.

ಅದೊಂದು ವಿಸ್ಮಯದ ಜಾಗ. ಎರಡು ದಿಕ್ಕಿನಲ್ಲೂ ಹಿಮಾಚ್ಛಾದಿತ ಪರ್ವತ ಶ್ರೇಣಿ. ಒಂದು ಕಡೆ ಕಣಿವೆ, ಮತ್ತೊಂದೆಡೆ ಸಾಲು ಬೆಟ್ಟಗಳ ಬುಡದಲ್ಲಿರುವುದೇ ಈ ಕುಂಜುಮ್ ದೇವತೆಯ ದೇವಾಲಯ. ಇಲ್ಲಿಗೆ ಹತ್ತಿರದಲ್ಲಿ ಜನವಸತಿ ಇರುವ ಜಾಗವೆಂದರೆ 'ಲೋಸರ್'. ಅದೊಂದು ಪುಟ್ಟ ಹಳ್ಳಿ.

ಈ ಕುಂಜುಮ್‌ನಲ್ಲಿ ಅಯಸ್ಕಾಂತೀಯ ಗುಣವನ್ನು ಹೊಂದಿರುವ ಒಂದು ಗುಂಡು ಕಲ್ಲಿನ ರೀತಿಯ ಕಲ್ಲಿನ ಮೇಲೆ ಕಾಳಿಮಾತೆಯ ಪಾದದ ಗುರುತಿದೆ. ಅದನ್ನು ಎಲ್ಲರೂ ಆರಾಧಿಸುತ್ತಾರೆ. ದ್ವಾಪರಯುಗದ ಕಾಲದಲ್ಲಿ ಕುಂತಿಮಾತೆಯು ಆ ಜಾಗದಲ್ಲಿ ನೆಲೆಸಿದ್ದು ಆಕೆಯು ಆ ಪಾದದ ಗುರುತನ್ನು ಪೂಜಿಸುತ್ತಾ ತನ್ನ ದಿನಗಳನ್ನು ಅಲ್ಲಿ ಕಳೆದಳೆಂದು ಪ್ರತೀತಿ. ಹಾಗಾಗಿ ಆಕೆಯನ್ನು ಅಲ್ಲಿ ಪೂಜಿಸಲಾಗುತ್ತದೆ. ಅಲ್ಲಿನ ಜಾಗದ ಶಕ್ತಿಯ ಬಗ್ಗೆ ಸುತ್ತಮುತ್ತಲ ಎಲ್ಲರೂ ಅಪಾರವಾದ ನಂಬಿಕೆ ಇಟ್ಟಿದ್ದಾರೆ.

ಕುಂಜುಮ್ ಪಾಸ್ ಬಳಸಿಕೊಂಡು ಹೋಗುವ ಯಾವುದೇ ವಾಹನ ಕೂಡ ದೇವಾಲಯಕ್ಕೆ ಒಂದು ಸುತ್ತು ಬಂದು ನಿಲ್ಲಿಸಿ ನಮಸ್ಕರಿಸದೇ ಹೋಗುವುದಿಲ್ಲ. ಹಾಗೇನಾದರೂ ತಪ್ಪಿಸಿ ಹೋದರೆ ಏನಾದರೂ ತೊಂದರೆಯಾಗಿ ಹಿಂತಿರುಗಿ ಬರಬೇಕಾಗುತ್ತದೆ ಎಂಬುದು ನಂಬಿಕೆ. ಅಲ್ಲಿರುವ ಗುಂಡುಕಲ್ಲಿನಂತಹ ಶಿಲೆಗೆ ಎಲ್ಲರೂ ನಾಣ್ಯವನ್ನು ಅಂಟಿಸಿ ತಮ್ಮ ಅಭೀಷ್ಟಗಳನ್ನು ಹರಸಿಕೊಂಡು ಹೋಗುತ್ತಾರೆ. ಅಲ್ಲೇ ಸಿಗುವ ಸ್ಥಳೀಯ ಮದ್ಯವನ್ನು ದೇವರಿಗೆ ನೈವೇದ್ಯ ಮಾಡುತ್ತಾರೆ. ಜೊತೆಗೆ ಭಕ್ತಿಪೂರ್ವಕವಾಗಿ ವಸ್ತ್ರವನ್ನು ಕಟ್ಟಿಹೋಗುವುದು ಅಲ್ಲಿನ ಪದ್ಧತಿ.

ಈ ದೇವಾಲಯವನ್ನು ನೋಡಿದಾಗ, ಇದೇನು ಸ್ತೂಪದ ಮಾದರಿಯಲ್ಲಿದೆಯಲ್ಲ ಎಂದು ಆಶ್ಚರ್ಯವಾಗಬಹುದು. ಅದಕ್ಕೆ ಕಾರಣವಿದೆ. ಈ ಭಾಗದ ಶೇ. 99 ಜನರು ಬೌದ್ಧ ಧರ್ಮವನ್ನು ಆಚರಿಸಿಕೊಂಡು ಬಂದಿರುತ್ತಾರೆ. ಈ ದೇವಾಲಯವನ್ನು ಲೋಸರ್ ಜನತೆ ನೋಡಿಕೊಂಡು ಬರುತ್ತಿದ್ದಾರೆ. ಹಾಗಾಗಿ ಈ ಭಾಗದ ಯಾವುದೇ ದೇವಾಲಯವನ್ನು ನೋಡಿದರೂ ಬೌದ್ಧ ಸ್ತೂಪದ ಮಾದರಿಯಲ್ಲೇ ಇರುತ್ತದೆ.

ಸುತ್ತಲೂ ನೋಡಲು ನಯನಮನೋಹರವಾದ ಮತ್ತು ಚಾರಣಿಗರಿಗೆ ಕೈಬೀಸಿ ಕರೆಯುವಂತಿರುವ ಶಿಖರ ಶ್ರೇಣಿಗಳಿದ್ದರೂ ಈ ಜಾಗದಲ್ಲಿ ಹೆಚ್ಚು ಗಳಿಗೆ ಕಳೆಯಲು ಸಾಧ್ಯವಿಲ್ಲ. ಏಕೆಂದರೆ ಕಣಿವೆಗಳಿಂದ ಮತ್ತು ಹಿಮಚ್ಛಾದಿತ ಬೆಟ್ಟದಿಂದ ಬೀಸುವ ತಣ್ಣನೆ ಗಾಳಿ ಮೈ ಕೊರೆಯುವಂತೆ ಮಾಡುತ್ತದೆ. ಸೂರ್ಯಾಸ್ತದ ನಂತರ ಇಲ್ಲಿ 3 ರಿಂದ 1 ಡಿಗ್ರಿವರೆಗೂ ಥಂಡಿಯ ಕೊರೆತ ಪ್ರಾರಂಭ. ಇಲ್ಲಿಂದ 20 ಕಿ.ಮೀ. ದೂರದ ಲೋಸರ್‌ನಲ್ಲಿ ತಂಗಲು ಹೋಮ್ ಸ್ಟೇಗಳು ಸಿಗುತ್ತವೆ. ಅಲ್ಲಿಗೆ ಹೋಗುವಾಗ ಸ್ಪಿಟಿ ನದಿಯ ದಡದಲ್ಲೇ ಹೋಗಬೇಕು. ಅದೊಂದು ವಿಶೇಷ ಅನುಭವ. ಕಾಡು ಕುದುರೆ, ಯಾಕ್, ಹಿಮ ಟಗರು ಹೀಗೆ ಹಲವಾರು ರೀತಿಯ ಪ್ರಾಣಿ–ಪಕ್ಷಿಗಳನ್ನು ನೋಡುತ್ತಾ ಕಣಿವೆಗಳ ಮಾರ್ಗದಲ್ಲಿ ಸಾಗುವುದು ರೋಮಾಂಚನ ಉಂಟುಮಾಡದಿರದು. 'ಲೋಸರ್' ಪುಟ್ಟ ಹಳ್ಳಿ. ಅಲ್ಲಿಯೂ ಬೌದ್ಧ ಸ್ತೂಪವಿದೆ. ಲಾಮಗಳಿಂದ ಅಲ್ಲಿ ಪೂಜಾ ಕೈಂಕರ್ಯಗಳು ನಡೆಯುತ್ತದೆ. ಇಲ್ಲಿಗೆ ಹತ್ತಿರವಿರುವ ಏಕೈಕ ನಗರ ಪ್ರದೇಶ ಖಾಜಾ. ಲೋಸರ್‌ನ ಸುತ್ತಮುತ್ತಲ ಜನತೆ ಎಲ್ಲ ಸೌಲಭ್ಯಕ್ಕೂ ಇದೇ ನಗರವನ್ನೇ ಆಶ್ರಯಿಸಿದ್ದಾರೆ.

ಕುಂಜುಮ್ ಪಾಸ್‌ನಿಂದ ಮನಾಲಿ ಮಾರ್ಗವಾಗಿ ಹೋದರೆ 'ಚಂದ್ರತಾಲ್' ಎನ್ನುವ ಪ್ರಸಿದ್ಧ ಕೊಳವನ್ನು ನೋಡಬಹುದು. ಅದರ ಸಮೀಪದವರೆಗೂ ವಾಹನಗಳು ಹೋಗುತ್ತವೆ. ಆದರೆ, ಸುಮಾರು ಎರಡು ಕಿ.ಮೀ. ಹಿಮಚ್ಛಾದಿತ ಪ್ರದೇಶದಲ್ಲಿ ನಡೆಯಬೇಕಾಗುತ್ತದೆ. ಸುಪ್ರಸಿದ್ಧ 'ಕೀ' ಮಾನೆಸ್ಟ್ರಿ ನೋಡಬಹುದು. ಕಾಜಾದಿಂದಾ 'ಕೊಮಿಕ್' ಎನ್ನುವ ಜಾಗಕ್ಕೆ ಹೋಗಬಹುದು. ಭಾರತದ ಅತೀ ಎತ್ತರದ ಜಾಗದಲ್ಲಿರುವ ಪೋಸ್ಟ್ ಆಫೀಸ್ ಅಲ್ಲಿದೆ.

ಮನಾಲಿಯಿಂದ ಕುಂಜುಮ್ ಜಾಗವನ್ನು ತಲುಪಿ, ಕಾಜಾದ ಮೂಲಕ ಕೆಳಕ್ಕೆ ಇಳಿಯಬಹುದು. ಹಾಗೆ ಬರುವ ಸಮಯದಲ್ಲಿ ಮತ್ತೊಂದು ಬಗೆಯ ಸೌಂದರ್ಯ ಕಣ್ಮನ ಸೆಳೆಯುತ್ತದೆ. ಆದರೆ ಇದೂ ಕೂಡ ತುಂಬಾ ಪ್ರಯಾಸದ ದಾರಿ. ಈ ಮಾರ್ಗವಾಗಿ ಹೊರಟರೆ ಕಾಜಾ, ಡಂಕರ್, ಟಬೋ, ಸಾಮ್ ದೋ, ನಾಕೋ ಕಲ್ಪ, ರಾಮ್‌ಪುರ ಮೂಲಕ ಹಾದು ಬರಬಹುದು. ಈ ದಾರಿಯಲ್ಲಿ ನೂರಾರು ವರ್ಷಗಳ ಇತಿಹಾಸ ಉಳ್ಳ ಗುಹೆಗಳು, ಮಾಂಕ್‌ಗಳ ಪಳೆಯುಳಿಕೆಗಳು, ಡಂಕರ್ ಲೇಕ್ ಎಲ್ಲವನ್ನು ನೋಡಿಕೊಂಡು ಹೋಗಬಹುದು. ಆದರೆ ಅವನ್ನೆಲ್ಲ ನೋಡಲು ಕನಿಷ್ಠ ಮೂರು ದಿನಗಳನ್ನಾದರೂ ಕಳೆಯಬೇಕಾಗುತ್ತದೆ. ■

### ಹೋಗುವುದು ಹೇಗೆ?

ಚಂಡೀಗಡದಿಂದ 433 ಕಿಮೀ ದೂರದಲ್ಲಿದೆ. ಮನಾಲಿವರೆಗೂ ಬಸ್ಸಿನಲ್ಲಿ ತೆರಳಿ ಅಲ್ಲಿಂದ ಪ್ರೈವೇಟ್ ವೆಹಿಕಲ್ ಮಾಡಿಕೊಂಡು ತೆರಳಬಹುದು. ಅಥವಾ ಬಸ್ಸಿಗಾಗಿ ವಿಚಾರಿಸಿ ತೆರಳಬಹುದು.

ಮತ್ತೊಂದು ಮಾರ್ಗ ಚಂಡೀಗಡದಿಂದ ರಾಂಪುರ, ನಾಕೋ, ಟಬೋ ಮೂಲಕ ಕುಂಜುಮ್ ತಲುಪಬಹುದು. ಇದು ಸುಮಾರು 610 ಕಿಮಿ ದೂರ ಕ್ರಮಿಸಬೇಕಾಗುತ್ತದೆ. ಎರಡೂ ಮಾರ್ಗದಲ್ಲಿ ಒಂದೊಂದು ದಿನ ತಂಗಬೇಕಾಗುತ್ತದೆ. ನಿರಂತರ ಪ್ರಯಾಣ ಆಗುವುದಿಲ್ಲ. ವಿಮಾನ ಮಾರ್ಗದಲ್ಲಿ ಹೋಗುವುದಾದರೆ ಮನಾಲಿವರೆಗೂ ಹೋಗಿ ಅಲ್ಲಿಂದ ಖಾಸಗಿ ವಾಹನದ ಮೂಲಕ ತೆರಳಬಹುದು.

